## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಾಗೇಪಲ್ಲಿ.

## ಸಿ.ಸಿ. ಸಂಖ್ಯೆ:75/2020

| | |
|---|---|
| ಫ್ರಾಸಾ | 4 |
| ಚಾಸಾ | 4 |

ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 05.04.2025.

ಸಾಕ್ಷಿಯ ಹೆಸರು : ಮೋಹನ್ ಎಂ.
ತಂದೆಯ ಹೆಸರು : ಮುನಿರೆಡ್ಡಿ
ವಯಸ್ಸು : 38 ವರ್ಷ
ಉದ್ಯೋಗ : ಅಬಕಾರಿ ಮುಖ್ಯ ಪೇದೆ, ಚಿಂತಾಮಣಿ ಉಪ-ವಿಭಾಗ.
ವಾಸಸ್ಥಳ : ಚಿಂತಾಮಣಿ

**ಮುಖ್ಯ ವಿಚಾರಣೆ : ಎಪಿಪಿ ರವರಿಂದಃ**

ದಿಃ 25.07.2015 ರಿಂದ 12.02.2024 ರವರೆಗೆ ಬಾಗೇಪಲ್ಲಿ ವಲಯ ಕಛೇರಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿಃ 31.01.2019 ರಂದು ಅಬಕಾರಿ ನಿರೀಕ್ಷಕರಾದ ಚಾಸಾ-5, ನಾನು ಮತ್ತಲು ಚಾಸಾ-1 ಮತ್ತು 2 ರವರು ಬೆಳಿಗ್ಗೆ 7.30 ರ ಸಮಯದಲ್ಲಿ ಬಾಗೇಪಲ್ಲಿ ತಾಲ್ಲೂಕು, ಗೌನಪಲ್ಲಿ ಕ್ರಾಸ್ ಬಳಿ ರಸ್ತೆ ಕಾವಲು ನಡೆಸಿ ವಾಹನ ತಪಾಸಣೆ ಮಾಡುತ್ತಿದ್ದಾಗ, ಬಿಳಿಯ ಬಣ್ಣದ ಕೆಎ-12-ಜೆಡ್-6666 ಸಂಖ್ಯೆಯ ಅಂಬಾಸಿಡರ್ ಕಾರ್ ಬರುತ್ತಿದ್ದು, ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಅದರ ಚಾಲಕ ವಾಹನವನ್ನು ಹಿಂದೆ ತೆಗೆದುಕೊಂಡು ಹೋಗಲು ಪ್ರಯತ್ನಿಸಿದನು. ನಂತರ ನಾವು ವಾಹನವನ್ನು ತಡೆದು ವಾಹನವನ್ನು ಶೋಧನೆ ಮಾಡಲು ನಮ್ಮ ನಿರೀಕ್ಷಕರು ಪಂಚರನ್ನು ಹುಡುಕಲು ಪ್ರಯತ್ನಿಸಿ, ಯಾರೂ ಸಿಗದಿದ್ದಾಗ ನಮ್ಮನ್ನು ಪಂಚರಾಗಿ ಬರಮಾಡಿಕೊಂಡಿರುತ್ತಾರೆ. ಸ್ಥಳದಲ್ಲಿ ಶೋಧನಾ ಸಮುಚಿತ ವಾರೆಂಟ್ ತಯಾರಿಸಿ ಅದಕ್ಕೆ ಸಿಬ್ಬಂದಿಯಾದ ಚಾಸಾ-1 ಮತ್ತು 2

ರವರ ಸಹಿ ಪಡೆದು ವಾಹನವನ್ನು ಶೋಧನೆ ಮಾಡಲಾಗಿ ಹಿಂಬದಿ ಡಿಕ್ಕಿಯಲ್ಲಿ 20 ಲೀಟರ್ ಸಾಮರ್ಥ್ಯದ ಒಂದು ಕ್ಯಾನ್ ಹಾಗೂ 10 ಲೀಟರ್ ಸಾಮರ್ಥ್ಯದ ಒಂದು ಪ್ಲಾಸ್ಟಿಕ್ ಕ್ಯಾನ್‌ನಲ್ಲಿ ಬಿಳಿ ಬಣ್ಣದ ದ್ರವ ಪದಾರ್ಥ ಕಂಡು ಬಂದಿತ್ತು. ನಂತರ ನಮ್ಮ ನಿರೀಕ್ಷಕರು ಸದರಿ ಕ್ಯಾನುಗಳ ಮುಚ್ಚಳ ತೆಗೆದು ವಾಸನೆಯನ್ನು ಗ್ರಹಿಸಿದ್ದು, ಅದು ಗಾಟು ವಾಸನೆ ಇರುವುದನ್ನು ದೃಢಪಡಿಸಿಕೊಂಡಿರುತ್ತಾರೆ. ನಂತರ ವಾಹನ ಚಾಲಕರ ಹೆಸರು ವಿಳಾಸ ಕೇಳಲಾಗಿ ಮೂರ್ತಿ ಬಿನ್ ಗೋಪಾಲಪ್ಪ, ಕುಂಬಾರಹಳ್ಳಿ ಗ್ರಾಮ, ಶಿಡ್ಲಘಟ್ಟ ತಾಲ್ಲೂಕು ಎಂದು ತಿಳಿಸಿರುತ್ತಾರೆ. ನಂತರ ಅಕ್ರಮ ಸೇಂದಿ ಸಾಗಾಟಕ್ಕೆ ಪರವಾನಗಿ ಹೊಂದಿರುವ ಬಗ್ಗೆ ವಿಚಾರಿಸಲು, ಪರವಾನಗಿ ಹೊಂದಿಲ್ಲವೆಂದು ತಿಳಿಸಿರುತ್ತಾರೆ. ನಂತರ ಸದರಿ ಕ್ಯಾನುಗಳಿಂದ ತಲಾ ಒಂದು ಲೀಟರ್ ಸಾಮರ್ಥ್ಯದ ಎರಡು ಪ್ಲಾಸ್ಟಿಕ್ ಬಾಟಲಿಗಳಲ್ಲಿ ಎರಡೂ ಕ್ಯಾನುಗಳಿಂದ ಸೇಂದಿಯನ್ನು ಪಡೆದು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಬಿಳಿ ಬಟ್ಟೆಯಿಂದ ಸುತ್ತಿ, ದಾರದಿಂದ ಕಟ್ಟಿ ಇಲಾಖಾ ಮೊಹರು ಹಾಕಿರುತ್ತೇವೆ. ನಂತರ ಸ್ಥಳದಲ್ಲಿ ಆರೋಪಿಯನ್ನು ದಸ್ತಗಿರಿ ಕ್ರಮ ಅನುಸರಿಸಿ ಮತ್ತು ಪಂಚನಾಮೆಯನ್ನು ಕೈಗೊಂಡಿರುತ್ತೇವೆ. ಅಲ್ಲದೇ ಮಾಲು ಮತ್ತು ಆರೋಪಿಯನ್ನು ಮುಂದಿನ ಕ್ರಮಕ್ಕಾಗಿ ಕಛೇರಿಗೆ ತರಲಾಗಿರುತ್ತದೆ.

ಸಾಕ್ಷಿಯು ನಿಪಿ-1ರಂತೆ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು **ನಿಪಿ-1(ಸಿ)** ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಚಾಸಾ-2 ಮತ್ತು 3 ರವರು ಸಹಿ ಮಾಡಿರುವುದಾಗಿ ನುಡಿಯುತ್ತಾರೆ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 7.30 ರಿಂದ 8.30 ರವರೆಗೆ ಜರುಗಿಸಿರುವುದಾಗಿ ನುಡಿಯುತ್ತಾರೆ.

ದಿಃ 16.02.2019 ರಂದು ರಾಸಾಯನಿಕ ಮಾದರಿಗಳನ್ನು ಕೇಂದ್ರ ರಾಸಾಯನಿಕ ಪ್ರಯೋಗಾಲಯ, ಬೆಂಗಳೂರಿಗೆ ಕಳುಹಿಸಿರುತ್ತೇವೆ. ದಿಃ 27.02.2019 ರಂದು ವರದಿಯೊಂದಿಗೆ ಮಾದರಿಗಳನ್ನು ಪಡೆದು ನಿರೀಕ್ಷಕರಿಗೆ ಒಪ್ಪಿಸಿರುತ್ತೇವೆ. ಸಾಕ್ಷಿಯು

ಮುದ್ದೇಮಾಲುಗಳನ್ನು ನೋಡಿ ಗುರುತಿಸಿದರು. ಅಲ್ಲದೇ ಆರೋಪಿಯನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿದರು.

**ಪಾಟೀಸವಾಲು : ಶ್ರೀ ಎ.ಎನ್ ವಕೀಲರಿಂದ, ಆರೋಪಿ ಪರವಾಗಿಃ**

ಘಟನೆ ನಡೆದ ದಿನ ನಾನು ಬೆಳಿಗ್ಗೆ 6.00 ಗಂಟೆಯವರೆಗೆ ಮನೆಯಲ್ಲಿದ್ದೆ. ಬೆಳಿಗ್ಗೆ 6.00 ಗಂಟೆ ಸಮಯದಲ್ಲಿ ನಾನು ಕರ್ತವ್ಯದಲ್ಲಿ ಇರಲಿಲ್ಲ. ಆದರೆ ಅಬಕಾರಿ ನಿರೀಕ್ಷಕರು ನನ್ನನ್ನು ಗಸ್ತು ಕಾರ್ಯಕ್ಕೆ ಕರೆದಿದ್ದು, ನಾನು ಬೆಳಿಗ್ಗೆ 7.00 ಗಂಟೆಗೆ ಕಛೇರಿಗೆ ಹಾಜರಾದೆ. ನಾನು ಕಛೇರಿಗೆ ಹೋದಾಗ ನಮ್ಮ ನಿರೀಕ್ಷಕರು, ಚಾಸಾ-1 ರಿಂದ 3 ರವರು ಇದ್ದರು. ಅವರೆಲ್ಲರೂ ಆಗ ಕರ್ತವ್ಯದಲ್ಲಿದ್ದರು. ಆ ದಿನ ಚಾಲಕರು ಯಾರು ಇದ್ದರು ಎಂದು ನೆನಪಿಲ್ಲ. 7.00 ಗಂಟೆಗೆ ಗೌನಪಲ್ಲಿ ಕ್ರಾಸ್ ಬಳಿ ಕರ್ತವ್ಯಕ್ಕೆ ಹೊರಟೆವು, ನಾವು ಕರ್ತವ್ಯಕ್ಕೆ ಹೋಗುವಾಗ ಹಾಜರಾತಿಯಲ್ಲಿ ಸಹಿ ಮಾಡುತ್ತೇವೆ ಎಂದರೆ ಸರಿ. ಆ ದಿನ ಹಾಜರಾತಿಗೆ ಸಹಿ ಮಾಡಿದ್ದೇವೆ. ಸದರಿ ಹಾಜರಾತಿ ವಹಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆ ದಿನ ಘಟನಾ ಸ್ಥಳದಲ್ಲಿ ಸಾರ್ವಜನಿಕರು ಇರಲಿಲ್ಲ.

ನಾವು ಘನ ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆದಿರುವುದಿಲ್ಲ. ಎರಡು ಬಿಳಿ ಬಣ್ಣದ ಕ್ಯಾನುಗಳನ್ನು ನಮ್ಮ ನೀರಿಕ್ಷಕರು ವಶಪಡಿಸಿಕೊಂಡಿದ್ದರು. ವಶಪಡಿಸಿಕೊಂಡಿದ್ದ ಎರಡೂ ಕ್ಯಾನುಗಳನ್ನು ಕಛೇರಿಗೆ ತೆಗೆದುಕೊಂಡು ಹೋಗಿದ್ದೆವು. ಆ ಕ್ಯಾನುಗಳನ್ನು ಏನು ಮಾಡಿದ್ದಾರೆ ಗೊತ್ತಿಲ್ಲ. ಅಂಬಾಸಿಡರ್ ಕಾರಿನ ಮಾಲೀಕರ ಹೆಸರು ಗಣೇಶ್. ನಾವು ದಾಳಿ ಮಾಡಿದ ಸಂದರ್ಭ ಫೋಟೋ ಅಥವಾ ವೀಡಿಯೋ ಚಿತ್ರೀಕರಣ ಮಾಡಿರುವುದಿಲ್ಲ. ದಾಳಿ ಮಾಡಿದಾಗ ಆರೋಪಿಯ ಸಹಿಯನ್ನು ನಮ್ಮ ನಿರೀಕ್ಷಕರು ಪಡೆದಿದ್ದಾರೆ. ಆರೋಪಿಯ ಸಂಬಂಧಿಕರಿಗೆ ದೂರವಾಣಿಯ ಮೂಲಕ ವಿಚಾರ ತಿಳಿಸಿದ್ದರೋ ಅಥವಾ ಇಲ್ಲವೋ ನೆನೆಪಿಲ್ಲ.

ಶೋಧನಾ ಸಮುಚಿತ ವಾರೆಂಟಿಗೆ ಚಾಸಾ-1, 2 ಮತ್ತು 5 ರವರು ಸಹಿ ಮಾಡಿರುತ್ತಾರೆ. ಶೋಧನಾ ಸಮುಚಿತ ವಾರೆಂಟಿಗೆ ನಾನು ಸಹಿ ಮಾಡಿಲ್ಲ. ಚಾಸಾ-1 ಮತ್ತು 2 ರವರು ಹೊರಗುತ್ತಿಗೆ ನೌಕರರು. ಮಾದರಿ ಸೀಲಿಗೆ ನಾನು ಸಹಿ ಮಾಡಿಲ್ಲ. ರಾಸಾಯನಿಕ ಪರೀಕ್ಷೆಗೆ ದ್ರವ ಪದಾರ್ಥವನ್ನು ಕಳುಹಿಸಲಾದ ಪ್ರತಿಗೆ ನಾನು ಸಹಿ ಮಾಡಿದ ಬಗ್ಗೆ ನೆನೆಪಿಲ್ಲ. ರಾಸಾಯನಿಕ ಪ್ರಯೋಗಾಲಯದಿಂದ ವರದಿ ಪಡೆದಾಗ ಅಲ್ಲಿ ನಾನು ಸಹಿ ಮಾಡಿರುತ್ತೇನೆ. ನಮ್ಮ ನಿರೀಕ್ಷಕರ ಮಾತು ಕೇಳಿ ಅಂಕಿ ಅಂಶಗಳಿಗೋಸ್ಕರ ಸೃಷ್ಟಿ ಮಾಡಿದ ದಾಖಲೆಗಳ ಮೇಲೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆ ದಿನ ಆರೋಪಿಯು ಸ್ಥಳದಲ್ಲಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಸೇಂದಿಯನ್ನು ಸಾಗಿಸುತ್ತಿರಲಿಲ್ಲ, ಆತನಿಂದ ಯಾವುದೇ ಸೇಂದಿಯನು ವಶಪಡಿಸಿಕೊಂಡಿಲ್ಲ ಮತ್ತು ಯಾವುದೇ ಪಂಚನಾಮೆಯನ್ನು ಕೈಗೊಂಡಿಲ್ಲ ಎಂದರೆ ಸರಿಯಲ್ಲ. ಆ ದಿನ ಚಾಸಾ-1 ಮತ್ತು 2 ರವರ ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.